ಇರುಳಿನ ಕಡು ನೀಲಿಗಪ್ಪಿನ ಮುಗಿಲಿನಗಲಕೂ ಅವಸರವಿಲ್ಲದೇ ಹರಿದಾಡುತ್ತಿರುವ ಬೆಳ್ಳನೆಯ ಮೋಡಗಳು. ಅವುಗಳಿಂದಾಗಿ ಎಲ್ಲೆಡೆಯೂ ಬಿಳುಪೋ ಬಿಳುಪು. ಆದರೆ, ಎತ್ತರದ ಚಂದಿರನ ಮಗ್ಗುಲಲ್ಲಿ ಮಾತ್ರ ತೆಳು ನೀಲಿ ಬಣ್ಣ. ನೀವು ಗಮನವಿಟ್ಟು ನೋಡಿದ್ದೇ ಆದರೆ, ತೇಲುತ್ತಿರುವುದು ಮೋಡಗಳಲ್ಲ, ಅದು ಚಂದಿರ. ಅದರ ತಡಿಯಲ್ಲಿ, ಅದರ ಜೊತೆಯಲ್ಲೇ ಇರುವ ಚಿನ್ನದ ನಕ್ಷತ್ರದ ಕಣ್ಣಿನಿಂದ ಹನಿಯೊಂದು ಬೀಳುತ್ತಿದೆ. ಚಂದ್ರ ತೇಲುತ್ತಿದ್ದಾನೆ ಕೊನೆಯಿಲ್ಲದ ಎತ್ತರಕ್ಕೆ. ಅಂತೆಯೇ ತನ್ನೊಂದಿಗೆ ಕರೆದೊಯ್ಯುತ್ತಿದ್ದಾನೆ ಆ ನಕ್ಷತ್ರವನ್ನೂ ಮತ್ತೂ ಎತ್ತರೆತ್ತರಕ್ಕೆ.

ಅವಳು ಕೂತಿದ್ದಾಳೆ ಕತ್ತು ಮೇಲ್ಮಾಡಿಕೊಂಡು ಹಾರೊಡೆದ ಕಿಟಕಿಯ ಕಟ್ಟೆಯಲ್ಲಿ. ಒಂದು ಚಣ ದಿಟ್ಟಿಸುತ್ತಿದ್ದ ಮುಗಿಲಿನಿಂದ ದಿಟ್ಟಿ ಕೀಳುತ್ತಾಳೆ. ಅವನು ನಿಂತಿದ್ದಾನೆ ಅವಳ ಮೊಣಕಾಲುಗಳ ಬಳಿ.

'ಟೋಲ್ಯಾ, ನಂಗೆ ಅದ್ಯಾವ ಬಣ್ಣ ಅಂತ ತಿಳೀತಿಲ್ಲ, ನಿಂಗೇನಾದ್ರೂ ಗೊತ್ತಾ ನೋಡು?'

'ಯಾವ ಬಣ್ಣದ ಬಗ್ಗೆ ಕೇಳ್ತಿದೀಯಾ, ಕಿಸಾ?'

'ನನ್ನ ಹಂಗಂತ ಕರೀಬ್ಯಾಡಾಂತ ಎಷ್ಟು ಸಾವಿರ ಸಲ ಹೇಳಿದೀನಿ.'

'ಹಂಗೇ ಆಗಲಿ ಕಿಸನ್ಯ ಅಲೆಕ್ಸಾಂಡ್ರೋವ್ನಾ ಮೇಡಂ.'

'ನಾನು ಮಾತಾಡ್ತಿರೋದು ಆ ಮೋಡಗಳ ನಡುವಿರುವ ಮುಗಿಲಿನ ಬಗ್ಗೆ. ಅಬ್ಬಾ ಎಂಥಾ ಅತ್ಯದ್ಭುತವಾದ ಬಣ್ಣ! ಅದು ಅತ್ಯದ್ಭುತವೂ ಹೌದು, ಅಂತೆಯೇ ದಿಗಿಲುಟ್ಟಿಸುವಂಥದ್ದೂ ಹೌದು. ಅದೀಗ ನಿಜಕ್ಕೂ ಅಲೌಕಿಕವಾದದ್ದು. ಅಂಥಾದ್ದೊಂದು ಈ ಭೂಮಿಯ ಮೇಲೆ ಇಲ್ಲವೇ ಇಲ್ಲ. ಒಂದು ಥರದ ಪಚ್ಚೆಯಂಥದ್ದು.'

'ಅದು ಮುಗಿಲಲ್ಲಿರೋದ್ರಿಂದ ದಿವ್ಯವಾದದ್ದೇ. ಅದು ಕೇವಲ ಪಚ್ಚೆಯೇ ಯಾಕಾಗಿರಬೇಕು? ಅಷ್ಟಕ್ಕೂ ಪಚ್ಚೆ ಅಂದರೇನು? ಅಂಥದ್ದೊಂದನ್ನು ಯಾವತ್ತೂ ನನ್ನ ಬದುಕಲ್ಲಿ ಕಂಡಿಲ್ಲ. ನಿಂಗೆ ಆ ಪದ ಇಷ್ಟ ಅಷ್ಟೇ.'

'ಹೌದು. ನಿಜ ಅದು ನಂಗೆ ಗೊತ್ತಿಲ್ಲ, ಅದು ಪಚ್ಚೆ ಅಲ್ಲದೇ ಇರಬಹುದು, ಆದರೆ ಮಾಣಿಕ್ಯ... ಬಹುಶಃ ಅಂಥಾದ್ದು ಸಿಗೋದು ಕೇವಲ ಸ್ವರ್ಗದಲ್ಲಿ ಮಾತ್ರ. ನೀನು ಇಂಥದ್ದನ್ನೆಲ್ಲಾ ನೋಡಿದ ಮೇಲೂ ಈ ಸ್ವರ್ಗ, ದೇವತೆಗಳು, ದೇವರ ಸಿಂಹಾಸನ ಇದೆಲ್ಲಾ ಇದಾವೆ ಅಂತ ನಂಬದೇ ಇರೋಕೆ ಹೇಗೆ ಸಾಧ್ಯ?'

'ಅದೇರೀತಿ, ಏಲೋ ಮರದಲ್ಲಿ ಬಂಗಾರದ ಪೇರು ಹಣ್ಣುಗಳು...'

'ಟೋಲ್ಯಾ, ಅದೆಷ್ಟು ಹಾಳಾಗೋಗಿದೀಯಾ ನೀನು? ತುಂಬಾ ಕೆಟ್ಟ ಹುಡುಗಿ ಕೂಡಾ ಯಾವಾಗಲೂ ಯಾವುದೇ ಹುಡುಗನಿಗಿಂತ ಒಳ್ಳೆಯವಳಾಗಿರ್ತಾಳೆ, ಅಂತ ಮರಿಯಾ ಸರ್ಗೇಯೇವ್ನಾ ಹೇಳೋದ್ರಲ್ಲಿ ಯಾವ ತಪ್ಪೂ ಇಲ್ಲ.'

'ಓಹ್, ಹಂಗಾದ್ರೆ ಸತ್ಯ ಅದರಷ್ಟಕ್ಕದು ಅವಳ ಬಾಯಿಂದ ಹಂಗೆ ಹೊರ ಬರುತ್ತೆ ಅಷ್ಟೇ,ಅಲ್ವಾ ಕಿಸಾ?'

ಅವಳು ಚುಕ್ಕೆಗಳ ಗುರುತಿದ್ದ ಅರಳೆಯ ದಿರಿಸು ತೊಟ್ಟಿದ್ದಳು. ಅಗ್ಗದ ಶೂ ಮೆಟ್ಟಿದ್ದಳು. ಅವಳ ಮೀನಖಂಡ ಮತ್ತು ಮೊಣಕಾಲುಗಳು ಹುಡುಗಿಯಂತೆ ಪುಷ್ಟವಾಗಿದ್ದವು. ಅವಳ ದುಂಡನೆಯ ಪುಟ್ಟ ತಲೆಯಲ್ಲಿ ತುಂಡು ಜಡೆಯೊಂದು ಮೋಹಕವಾಗಿ ಹಿಂದೆ ಇಳಿಬಿದ್ದಿತ್ತು. ಅವನು ಅವಳ ಮೊಳಕಾಲ ಮೇಲೆ ಕೈಯ್ಯೊಂದನ್ನಿಟ್ಟ. ಮತ್ತೊಂದು ಕೈಯ್ಯಿಂದ ಅವಳ ಭುಜಗಳನ್ನು ಬಳಸಿದ. ಒಂಚೂರು ತಮಾಷೆ ಮಾಡಿಕೊಂಡು ಅವಳ ತುಟಿಗಳಿಗೆ ಮುತ್ತುಗಳನ್ನೊತ್ತಿದ. ಅವಳು ಮೆಲ್ಲಗೆ ಅವನಿಂದ ಬಿಡಿಸಿಕೊಂಡು ತನ್ನ ಮೊಣಕಾಲುಗಳ ಮೇಲಿದ್ದ ಅವನ ಕೈಯ್ಯನ್ನು ದೂರ ತಳ್ಳಿದಳು.

'ಇದೇನಿದು? ನಾವೇನಾದ್ರೂ ಅಪರಾಧ ಮಾಡಿದೀವಾ?'